# ಜುಲೈ 2023

# ಸೇವಾ ವಾಣಿ

## ಸೇವಾ ಸಂಗಮ

## ಆರ್ಬಿಟ್






ಪೂಜ್ಯ ರಾಬರ್ಟ್ ಮಿರಾಂದಾ
ಗುಲ್ಬರ್ಗ ಧರ್ಮಾಧ್ಯಕ್ಷರು

ಫಾ. ವಿಕ್ಟರ್ ವಾಸ್
ನಿರ್ದೇಶಕರು

### "ಭಾರತದ ಸಂವಿಧಾನ ಕಾಪಾಡುವದು ನಮ್ಮ ನಿಮ್ಮೆಲ್ಲರ ಹೊಣೆ"

ಬೀದರ:– ದಿನಾಂಕ 13.06.2023 ರಂದು ಬೀದರ ತಾಲೂಕಿನ ಚಿಕ್‌ಪೇಟ ಗ್ರಾಮದ ಡಾನ್ ಬೋಸ್ಕೋ ಸಂಸ್ಥೆಯ ತರಬೇತಿ ಸಭಾಂಗಣದಲ್ಲಿ ಆಜೀಂ ಪ್ರೇಮಜಿ ಫೌಂಡೇಶನ್ ಇವರ ಮುಂದಾಳತ್ವದಲ್ಲಿ ಬೀದರ ಜಿಲ್ಲೆಯ ಸ್ವಯಂ ಸೇವಾ ಸಂಸ್ಥೆಯ ಪಧಾದಿಕಾರಿಗಳಿಗೆ ಭಾರತ ದೇಶದ ಸಂವಿಧಾನದ ಮೌಲ್ಯಗಳು ಕುರಿತು ಕಾರ್ಯಗಾರವನ್ನು ನಡೆಸಲಾಯಿತು. ಈ ತರಬೇತಿಗೆ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಲಕ್ಷ್ಮಣ ಗೌಡ, ಶ್ರೀಮತಿ ಸುನಿತಾ, ಶ್ರೀ ಮಂಜುನಾಥ, ಶ್ರೀಮತಿ ಶ್ರೀಲತಾ ಹಾಗೂ ಶ್ರೀ ಮಹದೇವ ಇವರು ಕಾರ್ಯಗಾರವನ್ನು ನಡೆಸಿಕೊಟ್ಟರು, "ಸಂವಿಧಾನದ ಎಲ್ಲಾ ಅಧ್ಯಯನಗಳು, ಸಂವಿಧಾನದ ಪ್ರಸ್ತಾವನೆ, ಸಂವಿಧಾನದ ಲಕ್ಷಣಗಳು, ಸಾರ್ವಭಾಮ, ಲಿಂಗ ಸಮಾನತೆ" ಹೀಗೆ ಹಲವಾರು ವಿಷಯಗಳ ಬಗ್ಗೆ ಚರ್ಚೆ ನಡೆಸಲಾಯಿತು. ಬೀದರ ಜಿಲ್ಲೆಯ ಒಟ್ಟು 07 ಸ್ವಯಂ ಸೇವಾ ಸಂಸ್ಥೆಗಳ ಒಟ್ಟು 30 ಪಧಾದಿಕಾರಿಗಳು ಭಾಗವಹಿಸಿದರು.





# ಮಹಿಳಾ ಸಬಲೀಕರಣ ಕಾರ್ಯಕ್ರಮ




ದಿನಾಂಕ 12.06.2023, 13.06.2023, 20.06.2023, 26.06.2023, 27.06.2023 ರಂದು ಹುಮಾನಬಾದ ತಾಲ್ಲೂಕಿನ ಆರ್ಬಿಟ್ ಸಂಸ್ಥೆಯಲ್ಲಿ, ಭಾಲ್ಕಿ ತಾಲೂಕಿನ ಯೇಸು ನಿಲಯದಲ್ಲಿ, ಹಲಬರ್ಗಾದಲ್ಲಿ ಹಾಗೂ ಬಸವಕಲ್ಯಾಣದ ಜ್ಞಾನ ಪ್ರಿಯಾ ಶಾಲೆಯಲ್ಲಿ, ಉಡಬಾಳ ಚರ್ಚ್‌ನಲ್ಲಿ ಮಹಿಳಾ ಸಬಲೀಕರಣ ಯೋಜನೆಯಿಂದ ಮಹಾ ಸಂಘ ಒಕ್ಕೂಟ ಬಲವರ್ಧನೆ ತರಭೇತಿಯನ್ನು ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಖ್ಫ. ವಿಕ್ಟರ್ ವಾಸ್ ಮತ್ತು ಆಯಾ ಕೇಂದ್ರದ ನಿರ್ದೇಶಕರು ಭಾಗವಹಿಸಿದರು. ಸಿಸ್ಟರ್ ಮರಿನಾ ರವರ ಸಮ್ಮುಖದಲ್ಲಿ ಮಹಾ ಸಂಘ / ತಾಲ್ಲೂಕ ಒಕ್ಕೂಟದ ಸದಸ್ಯರಿಗೆ ನಡೆಸಲಾಯಿತ್ತು. ಸಂಪನ್ಮೂಲ ವ್ಯಕ್ತಿ ರಾಜ್ಯ ಸಂಯೋಜಕರಾದ ಸಿ. ನ್ಯಾನ್ಸಿಯವರು ಮಹಿಳೆಯರು ಆರ್ಥಿಕತೆಗೆ ಹೆಚ್ಚಿನ ಮಹತ್ವ ಕೊಡದೆ ರಾಜಕೀಯ, ಸಾಮಾಜಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕವಾಗಿ ಸಬಲೀಕರಣರಾಗಬೇಕು ಎಂದು ತಿಳಿಸಿದರ. ಆರ್ಬಿಟ್ ಸಂಸ್ಥೆಯ ನಿರ್ದೇಶಕರು ಪ್ರತಿಯೊಂದು ಕಡೆ ನಡೆದ ತರಭೇತಿಯಲ್ಲಿ ಹಾಜರಿದ್ದು ಪ್ರತಿಯೊಂದು ಸಂಘದವರು ಆರ್ಬಿಟ್ ಸಂಸ್ಥೆಯೊಂದಿಗೆ ನೊಂದಣಿ ಮಾಡಿಸಿಕೊಳ್ಳಬೆಕಾದರೆ ಸಂಘದ ಸದಸ್ಯರು ತಲಾ 10 ರೂ ಕೊಟ್ಟು ನೊಂದಣಿ ಮಾಡಿಸಿಕೊಳ್ಳಬೇಕು ಎಂದು ಹೇಳಿದರು. ಪರಿಸರ ರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಕ್ಯಾನ್ಸರ ರೋಗದಿಂದ ಎಚ್ಚರವಹಿಸಬೇಕು ಕ್ಯಾನ್ಸರ ರೋಗಿಗಳು ಕಂಡು ಬಂದಲ್ಲಿ ಅವರಿಗೆ ಚಿಕಿತ್ಸೆಗಾಗಿ ಪ್ರೋತಾಹಿಸಿ ಸಹಾಯ ಮಾಡಿ ಉತ್ತಮ ಆರೋಗ್ಯ ಕಾಪಾಡುವಲ್ಲಿ ಮುದಾಗೋಣವೆಂದು ತಿಳಿಸಿದ್ದರು.

## "ಕ್ಯಾನ್ಸರ ಹಾಗೂ ಉಚಿತ ಕಣ್ಣಿನ ತಪಾಸಣಿ ಶಿಬಿರ"



ದಿನಾಂಕ 16.06.2023, 20.06.2023, 23.06.2023 ರಂದು ಜೋಳದಪ್ಪಾ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹಾಗೂ ಬೇಳಕೆರ ಗ್ರಾಮ ಪಂಚಾಯತನಲ್ಲಿ ಮತ್ತು ಜಲಸಂಗಿ ಗ್ರಾಮ ಪಂಚಾಯತನಲ್ಲಿ ಆರ್ಬಿಟ್ ಸಂಸ್ಥೆ ಹುಮಾನಬಾದ, ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಹೆಚ್.ಸಿ.ಜಿ ಆಸ್ಪತ್ರೆ ಗುಲ್ಬರ್ಗ, ಡಾ. ಸೈಲೆಸ್ಸ್ ಆಸ್ಪತ್ರೆ ಬೀದರ ಇವರ ಸಂಯುಕ್ತ ಆಶ್ರಯದಲ್ಲಿ ಕ್ಯಾನ್ಸರ ಹಾಗೂ ಉಚಿತ ಕಣ್ಣಿನ ಸಪಾಸಣೆ ಶಿಬಿರವು ಹಮ್ಮಿಕೊಳ್ಳಲಾಯಿತ್ತು.





# ನವಜೀವನ ಕಾರ್ಯಕ್ರಮ



## "ಆರೋಗ್ಯವೆ ಭಾಗ್ಯ"

ದಿನಾಂಕ 23.06.2023 ರಂದು ಹುಮನಾಬಾದ ತಾಲೂಕಿನ ಜಲಸಂಗಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಹೆಚ್.ಸಿ.ಜಿ ಆಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ಗ್ರಾಮ ಪಂಚಾಯತ ಆವರಣಾದಲ್ಲಿ ಉಚಿತ ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಯಿತು. ಆರ್ಬಿಟ್ ಸಂಸ್ಥೆಯ ನಿರ್ದೇಶಕರು, ಹೆಚ್.ಸಿ.ಜಿ ಹಾಗೂ ಸಾಲಿನ್ಸ ಆಸ್ಪತ್ರೆ ವೈದ್ಯರು ಬೀದರ ಇವರು ಕಾರ್ಯಕ್ರಮಕ್ಕೆ ದೀಪಾ ಬೇಳಗಿಸಿ ಚಾಲನೆ ನೀಡಿದರು. ಆರ್ಬಿಟ್ ಸಂಸ್ಥೆಯ ನಿರ್ದೆಶಕರಾದ ಫಾ. ವಿಕ್ಟರ್ ಅನೀಲ ವಾಸ್ ರವರು ಸಂಸ್ಥೆಯು ಮಾಡುವ ಕೆಲಸಕಾರ್ಯಗಳ ಕುರಿತು ವಿವರಣೆ ನೀಡುತಾ "ಆರೋಗ್ಯ ಅನ್ನೊದು ತುಂಬ ಮುಖ್ಯವಾಗಿದೆ, ಆರೋಗ್ಯವಾಗಿದ್ದರೆ ನಮ್ಮ ಆರ್ಥಿಕ ಸ್ಥಿತಿಯು ಚನ್ನಾಗಿರುತ್ತೆ ಆರೋಗ್ಯವಾಗಿಲ್ಲದಿದ್ದರೆ ಆರ್ಥಿಕ ಸ್ಥಿತಿಯು ಕುಗ್ಗಿಹೋಗುವದು ಸಹಜ" ಎಲ್ಲರು ಆರೋಗ್ಯ ಶಿಬಿರದಲ್ಲಿ ಪಾಲ್ಗೊಂಡು ಸದುಪಯೋಗವನ್ನು ಪಡೆದುಕೋಳ್ಳಬೇಕೆಂದು ತಿಳಿಸಿದರು.

ಆರ್ಬಿಟ್ ಸಂಸ್ಥೆಯ ಸಹ ನಿರ್ದೆಶಕರಾದ ಫಾ// ವಿಜಯಕುಮಾರ, ಗ್ರಾ.ಪಂ ಅಧ್ಯಕ್ಷರಾದ ಶ್ರೀ ಆನಂದ ಖಂಡಗುಂಡ, ಜಲಸಂಗಿ ಉಪ-ಕೇಂದ್ರದ ಸಿ.ಎಚ್.ಓ ಶ್ರೀಮತಿ ವನ್ಮಾಲಾ, ಹೆಚ್.ಸಿ.ಜಿ ಮತ್ತು ಸಾಲಿನ್ಸ ಆಸ್ಪತ್ರೆ ಸಿಬ್ಬಂದಿವರ್ಗದವರು ಹಾಗೂ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಪ್ರವಿಣ, ಶ್ರೀ ವಿಜಯಕುಮಾರ, ಶ್ರೀಮತಿ ಸವಿತಾ, ಶ್ರೀಮತಿ ಮಹಾದೇವಿ. ಶ್ರೀಮತಿ ಮಮತಾ, ಶ್ರೀಮತಿ ಕವಿಕಾ, ಕುಮಾರ ನಿಕ್ಸನ್ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು. ಈ ಶಬಿರದಲ್ಲಿ 75 ಜನರು ಭಾಗವಹಿಸಿ ಶಿಬಿರದ ಸದುಪಯೋಗವನ್ನು ಪಡೆದುಕೊಂಡಿದ್ದಾರೆ.





## “ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ”




ದಿನಾಂಕ 15.06.2023 ರಂದು ಹುಮನಾಬಾದ ತಾಲೂಕಿನ ಇಂದಿರಾನಗರ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಂ ಪ್ರೇಮಜಿ ಫೌಂಡೇಶನ್ ಇವರ ಸಂಯುಕ್ತಾಶ್ರಯದಲ್ಲಿ ನವಜೀವನ ಕಾರ್ಯಕ್ರಮದ ಅಡಿಯಲ್ಲಿ ಸಾಮಾನ್ಯ ಜನ ವಾಸಿಸುವ ಸ್ಥಳದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತ್ತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಪ್ರೀತಿ ಅವರು ಕಾರ್ಯಕ್ರಮವನ್ನುದ್ದೆಶಿಸಿ ಮಾತನಾಡುತ್ತಾ, ಮಾನಸಿಕ ಕಾಯಿಲೆ ಎಂದರೇನು? ಅದು ಹೇಗೆ ಬರುತ್ತದೆ, ಅದರ ಲಕ್ಷಣಗಳು ಯಾವವು ಹಾಗೂ ಇ ಕಾಯಿಲೆ ಹೇಗೆ ತಡೆಗಟ್ಟಬಹುದು ಎಂದು ತಿಳಿಸಿದರು. ನಿಮ್ಮ ನೆರೆಹೋರೆಯವರಲ್ಲಿ ಈ ಕಾಯಿಲೆ ಕಂಡುಬಂದರೆ ಸರಕಾರಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ಪಡೆಯಬಹುದು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ನವಜೀವನ ಕಾರ್ಯಕ್ರಮದ ಆಪ್ತಸಮಾಲೋಚಕರಾದ ಶ್ರೀ ಅರುಣಕುಮಾರ ಹಾಗೂ ಒಟ್ಟು 14 ಜನರು ರವರು ಭಾಗವಹಿಸಿದರು.

ದಿನಾಂಕ 09.06.2023 ರಂದು ಹುಮನಾಬಾದ ತಾಲೂಕಿನ ದುಬಲಗುಂಡಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಒಟ್ಟು 12 ಜನರಿಗೆ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಅಡಿಯಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ಪೂಜಾ ರವರು ಕಾರ್ಯಕ್ರಮವನ್ನು ಉದ್ದೆಶಿಸಿ ಮಾನಸಿಕ ಕಾಯಿಲೆ ಎಂದರೇನು? ಅದು ಹೇಗೆ ಬರುತ್ತದೆ, ಅದರ ಲಕ್ಷಣಗಳು ಯಾವವು ಇ ಕಾಯಿಲೆ ಹೆಗೆ ತಡೆಗಟ್ಟಬಹುದು ಎಂದು ತಿಳಿಸಿದರು. ಈ ಕಾಯಿಲೆ ಕಂಡುಬಂದರೆ ಸರಕಾರಿ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ಮತ್ತು ಮಾತ್ರೆಗಳು ಪಡೆಯಬಹುದು ಎಂದು ಮಾಹಿತಿ ನಿಡಲಾಯಿತು.






ದಿನಾಂಕ 25.06.2023 ರಂದು ಹುಮನಾಬಾದ ತಾಲೂಕಿನ ನಿಂಬೂರ್ ಗ್ರಾಮದ ಸರಕಾರಿ ಪ್ರೌಢ ಶಾಲೆಯ ಮಕ್ಕಳಿಗೆ ಆರ್ಬಿಟ್ ಸಂಸ್ಥೆಯ ಅಡಿಯಲ್ಲಿ ನಡೆಯುವ ನವಜೀವನ ಕಾರ್ಯಕ್ರಮದ ವತಿಯಿಂದ ಮಕ್ಕಳಿಗೆ ಮಾನಸಿಕ ಕುರಿತು ಜಾಗೃತಿ ಕಾರ್ಯಕ್ರಮ ಮಾಡಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ನೀಲಕಂಠ ರವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ, ಮಾನಸಿಕ ಕಾಯಿಲೆ ಎಂದರೇನು? ಮಾನಸಿಕ ಕಾಯಿಲೆ ಎಂಬುದು ಮೇದುಳಿನ ಕಾಯಿಲೆಯಾಗಿದ್ದು ಇಂತಹ

ಕಾಯಿಲೆಯಿಂದ ನರಳುತ್ತಿರುವ ವ್ಯಕ್ತಿಯ ಆಲೋಚನೆಗಳಲ್ಲಿ ಮತ್ತು ಭಾವನೆಗಳಲ್ಲಿ ಏರುಪೇರು, ವಿಚಿತ್ರ ಅನುಭವಗಳು, ಅತಿಯಾದ ದುಖ ಅತಿಯಾದ ಸಂತೋಷ, ವಿನಾಕಾರಣ ಅನುಮಾನ ದಿನನಿತ್ಯದ ಚಟುವಟಿಕೆಗಳು ಮತ್ತು ಜವಾಬ್ದಾರಿಗಳಲ್ಲಿ ತೊಂದರೆ ಆಗಿರುತ್ತದೆ. ಇದು ಜಿವನದ ಹಾದಿಯಲ್ಲಿ ಯಾರಿಗಾದರು ( ಹೆಣ್ಣು–ಗಂಡು, ಬಡವ–ಶ್ರೀಮಂತ, ಅಕ್ಷರಸ್ಥ–ಅನಾಕ್ಷರಸ್ಥ ಹಾಗೂ ಮಕ್ಕಳಿಗು ದೋಡ್ಡವರಿಗು ) ಬರಬಹುದು ಎಂದು ತಿಳಿಸಲಾಯಿತ್ತು. ಈ ಕಾರ್ಯಕ್ರಮದಲ್ಲಿ ಒಟ್ಟು 101 ಮಕ್ಕಳು ಭಾಗಿಯಾಗಿರುತ್ತಾರೆ.

## "ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ"



ದಿನಾಂಕ 19.06.2023 ರಂದು ಚಿಟಗುಪ್ಪಾ ತಾಲೂಕಿನ ನೀರ್ಣ ಗ್ರಾಮದ ಸರಕಾರಿ ಕನ್ಯಾ ಪ್ರೌಢ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆಯ ನವಜೀವನ ಕಾರ್ಯಕ್ರಮದ ಅಡಿಯಲ್ಲಿ ಮಕ್ಕಳಿಗೆ ಮಾನಸಿಕ ಅಸ್ವಸ್ಥತೆ ಕುರಿತು ಜಾಗೃತಿ ಕಾರ್ಯಕ್ರಮ ನಡೆಸಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ನವಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ಅರುಣಕುಮಾರ ರವರು ಮಾನಸಿಕ ಕಾಯಿಲೆ ಎಂದರೇನು? ಮಾನಸಿಕ ಆರೋಗ್ಯ ಎಂದರೆನು ? ಮಾನಸಿಕ ಕಾಯಿಲೆಯ ಲಕ್ಷಣಗಳ ಕುರಿತು ಮಾಹಿತಿ ನೀಡಿದರು. ಈ ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಗುರುಗಳು, ಸಹ ಶಿಕ್ಷಕರು ಮತ್ತು 65 ಮಕ್ಕಳು ಭಾಗವಹಿಸಿದರು.

## "ಮಾನಸಿಕ ಅಸ್ವಸ್ಥರ ಉಚಿತ ತಪಾಸಣೆ ಶಿಬಿರ"




ಆರ್ಬಿಟ ಸಂಸ್ಥೆ ಹಾಗೂ ಅಜಿಂ ಪ್ರೇಮಜೀ ಫೌಂಡೇಶನ್ ಇವರ ಸಂಯುಕ್ತಾಶ್ರಯದಲ್ಲಿ ನವಜೀವನ ಕಾರ್ಯಕ್ರಮದ ಅಡಿಯಲ್ಲಿ ಮಾನಸಿಕ ಅಸ್ವಸ್ಥತೆ ಹೊಂದಿರುವ ವ್ಯಕ್ತಿಗಳಿಗೆ ದಿನಾಂಕ 08.06.2023 ರಂದು ಹುಮನಾಬಾದ ನಗರದ ಆರ್ಬಿಟ ಸಂಸ್ಥೆಯಲ್ಲಿ ಉಚಿತ ತಪಾಸಣೆ ಶೀಬಿರ ಹಾಗೂ ಮಾನಸಿಕ ಅಸ್ವಸ್ಥರ ಧೃಡಿಕರಣ ಶೀಬಿರವನ್ನು ಹಮ್ಮಿಕ್ಕೊಳ್ಳಲಗಿತ್ತು. ಈ ಶೀಬಿರಕ್ಕೆ ಬಸವಕಲ್ಯಾಣ ತಾಲೂಕಿನ ಮಾನಸಿಕ ತಜ್ಞರಾದ ಡಾ. ರಿತೇಶ ರವರು ಬಂದಂತಹ ಮಾನಸಿಕ ಅಸ್ವಸ್ಥತೆ ಹೊಂದಿರುವ ವ್ಯಕ್ತಿಗಳಿಗೆ ಧೃಡಿಕರಣ ಮಾಡಿದರು. ಸಂಸ್ಥೆಯ ನಿರ್ದೇಶಕರಾದ ಫಾ. ವಿಕ್ಟರ್ ವಾಸ ರವರು ತಪಾಸಣ ಶೀಬಿರಕ್ಕೆ ಬಂದಂತ ಮಾನಸಿಕ ಅಸ್ವಸ್ಥರ ದಾಖಲೆಗಳನ್ನು ಸೂಕ್ತವಾಗಿ ನಿರ್ವಹಿಸಲು ಕಾರ್ಯಕರ್ತರಿಗೆ ಸೂಚಿಸಿದರು. ಈ ಶೀಬಿರಕ್ಕೆ ಒಟ್ಟು 12 ಫಲಾನುಭವಿಗಳು ಶೀಬಿರದ ಸದುಪಯೋಗವನ್ನು ಪಡೆದುಕೊಂಡಿದ್ದಾರೆ.



# ಮಕ್ಕಳ ಸಹಾಯವಾಣಿ (1098) ಕಾರ್ಯಕ್ರಮ




## “ಬಾಲ್ಯ ವಿವಾಹದಿಂದ ಮಗುವಿನ ರಕ್ಷಣೆ”

ದಿನಾಂಕ 24.06.2023 ರಂದು ಹುಮನಾಬಾದ ತಾಲೂಕಿನ ಜಲಸಂಗಿ ಗ್ರಾಮದಲ್ಲಿ 29 ನೇ ತಾರಿಕಿನಂದು ಬಾಲ್ಯ ವಿವಾಹ ಕಾರ್ಯಕ್ರಮ ಆಯೋಜಿಸಲಾಗಿತ್ತು. ಮಕ್ಕಳ ಸಹಾಯವಾಣಿಗೆ ಬಂದ ಕರೆಯ ಮೆರೆಗೆ ಆರ್ಬಿಟ್ ಸಂಸ್ಥೆಯ ಮಕ್ಕಳ ಸಹಾಯವಾಣಿ ತಂಡ, ಅಧಿಕಾರಿಗಳೊಂದಿಗೆ ಹೋಗಿ ಬಾಲ್ಯ ವಿವಾಹ ಕಾರ್ಯವನ್ನು ತಡೆಗಟ್ಟಿ ಹುಡುಗಿಯ ಶಿಕ್ಷಣ ಮುಂದುವರೆಸಲು ಸಹಾಯ ಮಾಡಿದರು.

# ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ




ದಿನಾಂಕ 21-06-2023 ರಂದು ಸೋನಕೇರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಘ್ರ ಪತ್ತೆ ಹಚ್ಚುವಿಕೆಯ ಕಾರ್ಯಕ್ರಮ ಹಮ್ಮಿಕೋಳ್ಳಲಾಯಿತು. ವಿಷೇಶ ವಿಕಲಚೆತನ ಮಕ್ಕಳ ಬಗ್ಗೆ ಸ್ವ ವಿಸ್ತಾರವಾಗಿ ಶಾಲಾ ಮಕ್ಕಳಿಗೆ ಹಾಗೂ ಶಿಕ್ಷಕರಿಗೆ ಮಾಹಿತಿ ಕೋಡಲಾಗಿದೆ. ಸಂಪನ್ಮೂಲ ವ್ಯಕ್ತಿಗಳಾಗಿ ಶಾಲೆಯ ಮುಖ್ಯೋಪಾದ್ಯೇಯರಾದ ಶ್ರೀ॥ ಶ್ರೀಮಂತ ಸರ್ ರವರು ವಿಕಲತೆ ಮಕ್ಕಳ ಬಗ್ಗೆ ಓಂದೆರಡು ಮಾತುಗಳನಾಡಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆ ರಾದ ಶ್ರೀಮತಿ ಕವಿತಾ ರವರು ಮಕ್ಕಳಿಗೆ ಉಚಿತವಾಗಿ ಫಿಜಿಯೊಥೇರಫಿ ಹಾಗೂ ಸ್ಪೀಚ್ ಥೇರೆಫಿ ಮಾಡಿಸಲು ನಮ್ಮ ಗ್ರಾಮಕ್ಕೆ ಬಂದಿದ್ದಾರೆ ಕೂತಲ್ಲೆ ಕುಳಿತಿರುವ ಮಕ್ಕಳಿಗೆ ಗೋಡೆಯ ಸಹಾಯದಿಂದ ಹಾಗೂ ಮರಳಲ್ಲಿ ನಡೆಸುವುದನ್ನು ಕಲಿಸಿಕೊಡಲಿದ್ದಾರೆ ಎಂದು ಶೀಕ್ಷಕರು ಮಕ್ಕಳಿಗೆ ತಿಳಿಸಿದ್ದಾರೆ. ಸರ್ಕಾರದಿಂದ ಸಿಗುವಂತಹ ಸೌಲಭ್ಯಗಳು, UDID CARD, ಆಧಾರ್ ಕಾರ್ಡ್ ಸೌಲಭ್ಯಗಳನ್ನು ಲಭಿಸಲು ಸಹಾಯ ಮಾಡಿಸಿಕೊಡಲಿದ್ದಾರೆ ಎಂದು ಹೇಳಿದರು. ಮಕ್ಕಳು ಹಾಗೂ ಶಿಕ್ಷಕರು ಒಟ್ಟು 55 ಜನ ಭಾಗವಹಿಸಿದ್ದರು.

## “ಮಕ್ಕಳೆ ನಮ್ಮ ಆಸ್ತಿ”




ದಿನಾಂಕ 09.06.2023 ರಂದು ಬೆಳ್ಳಿಗ್ಗೆ 11 ಗಂಟೆಗೆ ಹುಮನಾಬಾದ ತಾಲ್ಲೂಕಿನ ದುಬುಲಗುಂಡಿ ವಲಯದಲ್ಲಿ ಅಂಗನವಾಡಿ ಕೇಂದ್ರದಲ್ಲಿ ಅಪೌಷ್ಟಿಕತೆಯಲ್ಲಿ ಬಳಲುತಿರುವ ಮಕ್ಕಳ ಬೆಳವಣಿಗೆ ಮತ್ತು ತಾಯಿಂದರ ಸಭೆ ನಡೆಸಲಾಯಿತು. ಈ ಸಭೆಯಲ್ಲಿ 5 ಅಂಗನವಾಡಿ ಕೇಂದ್ರದ ಕಾರ್ಯ ಕರ್ತೆಯರು ಹಾಗೂ ಆರ್ಬಿಟ್ ಸಂಸ್ಥೆಯ ಶ್ರೀಘ್ರಪತ್ತೆ ಹಚ್ಚುವಿಕೆ ಕಾರ್ಯಕ್ರಮದ ಸಂಯೋಜಕರಾದ ಶ್ರೀಮತಿ ಮಮತಾ, ಅಂಗನವಾಡಿ ಕಾರ್ಯಕರ್ತೆಯರು, ಗರ್ಭಿಣಿಯರು, ಬಾಣಂತಿಯರು ಹಾಗೂ ಮಕ್ಕಳ ತಾಯಿಂದಿರು ಉಪಸ್ಥಿತರಿದ್ದರು. ಈ ಸಭೆಯಲ್ಲಿ ಮುಖ್ಯವಾಗಿ ಮಕ್ಕಳ ಲಾಲನೆ ಪೋಷಣೆ ಹಾಗೂ ತೂಕದ ಬಗ್ಗೆ ಚೆರ್ಚೆ ಮಾಡಲಾಗಿತ್ತು. ಮಕ್ಕಳನ್ನು ಸರಿಯಾದ ಸಮಯಕ್ಕೆ ಅಂಗನವಾಡಿಗೆ ಕಳಿಸಿಕೂಡಿ ಎಂದು ತಿಳಿಸಲಾಯಿತು. ಒಟ್ಟು 25 ಜನ ಭಾಗವಹಿಸಿದ್ದರು.

## “ಪರಿಸರ ಕುರಿತು ಜಾಗೃತಿ ಕಾರ್ಯಕ್ರಮ”



ದಿನಾಂಕ 05-06-2023 ರಂದು ವಿಶ್ವ ಪರಿಸರ ದಿನಾಚರಣೆಯನ್ನು ಪ್ರಕಾಶ್ ವಿದ್ಯಾಲಯ ಪ್ರೌಢ ಶಾಲೆ ಘಾಟಬೋರಳ ನಲ್ಲಿ ಆಚರಣೆ ಮಾಡಲಾಯಿತು ಕಾರ್ಯಕ್ರಮದ ಅಧ್ಯಕ್ಷ ಸ್ಥಾನವನ್ನು ಮುಖ್ಯಗುರುಗಳಾದ ಪಂಡಿತ್ ಬಾಳುರೆ ಸರ್ ವಹಿಸಿದ್ದರು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಕಾಂಬ್ಳೆ ಸರ್ ವಹಿಸಿದರು. ಸಿಬ್ಬಂದಿ ವರ್ಗದವರು ಕೂಡ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಒಟ್ಟು 40 ಮಕ್ಕಳು ಭಾಗವಹಿಸಿದರು. ಶ್ರೀ ಗಾಂಬ್ಳೆ ಯವರು ಪರಿಸರದ ವಿನಾಶದ ಬಗ್ಗೆ ಹಾಗು ಪ್ಲಾಸ್ಟಿಕ್ ಬಳಕೆಯ ಅಪಾಯ ಕುರಿತು ಮಾಹಿತಿ ನೀಡಿದರು. ಪ್ರತಿಯೊಬ್ಬರು ಎರಡು ಸಸಿಗಳನ್ನು ನೆಟ್ಟು ಅದಕ್ಕೆ ನೀರು ಹಾಕಿ ಬೆಳೆಸುತ್ತೆವೆ ಎಂದು ಪಿತಿಜ್ಞೆಯನ್ನು ಮಾಡಿದರು. ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಸೂರ್ಯಕಾಂತ್ ಇ.ಐ ರವರು ಪರಿಸರದ ದುಷ್ಪರಿಣಾಮ ಕುರಿತು ಮಾಹಿತಿ ನಿಡಿದರು. ಬಸವರಾಜ ತಾನಾಜಿಯವರು ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಕಾರ್ಯ



### ಬೆಳಕೇರಾ: ಉಚಿತ ಆರೋಗ್ಯ ತಪಾಸಣೆ

ಚಿಟಗುಪ್ಪ: 'ಉತ್ತಮ ಆರೋಗ್ಯವಂತರಿಂದ ಸದೃಢ ಸಮಾಜ ರೂಪಿಸಲು ಸಾಧ್ಯ. ಆರೋಗ್ಯವೇ ಭಾಗ್ಯವಾಗಿದೆ' ಎಂದು ಆರ್ಬಿಟ್ ಸಂಸ್ಥೆ ನಿರ್ದೇಶಕ ಡಾ.ಸಾಲಿನ್ ಹೇಳಿದರು.

ತಾಲ್ಲೂಕಿನ ಬೆಳಕೇರಾ ಗ್ರಾಮದ ಹನುಮಾನ ದೇಗುಲದಲ್ಲಿ ಗುರುವಾರ ನಡೆದ ಕ್ಷಯ ರೋಗ ಪರೀಕ್ಷೆ ಹಾಗೂ ಉಚಿತ ಆರೋಗ್ಯ ತಪಾಸಣೆ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಡಾ.ಅಶ್ವಿನಿ ಮಾತನಾಡಿ, 'ಮಹಿಳೆಯರು ದೇಹದ ಮೇಲೆ ಬಿಳಿ, ಕೆಂಪು ಮಚ್ಚೆ, ಸ್ತನಗಳಲ್ಲಿ ಗಡ್ಡೆಗಳು ಕಂಡು ಬಂದಾಗ ತಕ್ಷಣ ವೈದ್ಯರನ್ನು ಸಂಪರ್ಕಿಸಿ ಪರೀಕ್ಷೆ ಮಾಡಿಸಿಕೊಂಡು ಚಿಕಿತ್ಸೆ ಪಡೆಯಬೇಕು' ಎಂದರು.

ಶಿಬಿರದಲ್ಲಿ ಬಿ.ಪಿ., ಶುಗರ್ ಪರೀಕ್ಷೆ ಮಾಡಲಾಯಿತು. ಗ್ರಾಮ ಪಂಚಾಯಿತಿ ಅಧ್ಯಕ್ಷ ಮಾಣಿಕ, ಸದಸ್ಯ ಸೂರ್ಯಕಾಂತ, ಅಜಿಮೊದ್ದೀನ್ ಆರ್ಬಿಟ್ ಸಂಸ್ಥೆ ಸಹನಿರ್ದೇಶಕ ವಿಜಯಕುಮಾರ್, ಸಿಬ್ಬಂದಿ ರೀಟಾ, ಸವಿತಾ, ಅಮೀತ್, ಹಣಮಂತ, ಆಶಾ, ಅಂಗನವಾಡಿ ಕಾರ್ಯಕರ್ತೆಯರು ಇದ್ದರು.

ಚಿಟಗುಪ್ಪ ತಾಲ್ಲೂಕಿನ ಬೆಳಕೇರಾ ಗ್ರಾಮದಲ್ಲಿ ಗುರುವಾರ ಆರ್ಬಿಟ್ ಸಂಸ್ಥೆಯಿಂದ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಯಿತು



ಭಾರತ ವೈಭವ

POWERED BY. KHUSHI HOST

### ಸಂಘಟನೆಯಿಂದ ಸದೃಢರಾಗಿ: ಫಾದರ್ ಸುನಿಲ್ ಮಾನ್ಕಾರೆ

# ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಕಾರ್ಯ

## ಆರ್ಬಿಟ್ ಸಂಸ್ಥೆ ಹಾಗೂ ಹೆಚ್‌ಸಿಜಿ ಆಸ್ಪತ್ರೆ ಉಚಿತ ಆರೋಗ್ಯ ಶಿಬಿರ



ಮಲ್ಲಮ್ಮ ಸುಡಿ ವಾರ್ತೆ

ಹುಮನಾಬಾದ23: ಹುಮನಾಬಾದ ತಾಲೂಕಿನ ಜಳಸಂಗಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಹೆಚ್ ಸಿ ಜಿ ಆಸ್ಪತ್ರೆ ಇವರ ಸಂಯುಕ್ತಾಶ್ರಯದಲ್ಲಿ ಗ್ರಾಮ ಪಂಚಾಯತ ಆವರಣದಲ್ಲಿ ಉಚಿತ ಆರೋಗ್ಯ ಶಿಬಿರ ಹಮ್ಮಿಕೊಳ್ಳಲಾಯಿತು. ಆರ್ಬಿಟ್ ಸಂಸ್ಥೆಯ ನಿರ್ದೇಶಕರು, ಹೆಚ್ ಸಿಜಿ ಹಾಗೂ ಸಾಲಿನ ಆಸ್ಪತ್ರೆ ಪಷ ಬೀದರ ಇವರು ಕಾರ್ಯಕ್ರಮಕ್ಕೆ ದೀಪಾ ಬೆಳಗಿಸಿ ಚಾಲನೆ ನೀಡಿದರು. ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾ// ಅನೀಲ. ವಿಕ್ಟರ್ ವಾಸ್ ರವರು ಸಂಸ್ಥೆಯು ಮಾಡುವ ಕೆಲಸಕಾರ್ಯಗಳ ಕುರಿತು ವಿವರಣೆ ನೀಡುತಾ "ಆರೋಗ್ಯ ಅನ್ನೊದು ತುಂಬ ಮುಖ್ಯವಾಗಿದೆ. ಆರೋಗ್ಯವಾಗಿದ್ದರೆ ನಮ್ಮ ಆರ್ಥಿಕ ಸ್ಥಿತಿಯು ಚನ್ನಾಗಿರುತ್ತೆ ಆರೋಗ್ಯವಾಗಿಲ್ಲದಿದ್ದರೆ ಆರ್ಥಿಕ ಸ್ಥಿತಿಯು ಕುಗ್ಗಿಹೋಗುವದು ಸಹಜ' ಎಲ್ಲರು ಆರೋಗ್ಯ ಶಿಬಿರದಲ್ಲಿ ಪಾಲ್ಗೊಂಡು ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಹೆಚ್.ಸಿ.ದ ಆಸತ್ರೆಯ ವೈದ್ಯರಾದ ಡಾ॥ ತನ್ವೀರ ಚಾ ಅವರು ಮಾತನಾಡುತ್ತ "ಹೆಚ್ಚೆ ಇಜ್ ವೇಲ್ತ್" ಎನ್ನುವ ಘೋಷಣೆ ಹೇಳುತ್ತಾ ನಿಮ್ಮ ಕುಟುಂಬ ಆರೋಗ್ಯವಾಗಿರಬೇಕೆಂದರೆ ಮೊದಲು, ನಿವು ಆರೋಗ್ಯವಾಗಿರಬೇಕು ಎಂದು ತಿಳಿಸಿದರು. ವಸ) ಕೇಂದ್ರದ ನಿರ್ದೇಶಕರಾದ ಫಾ// ವಿನಸೆಂಟ್ ಥೋರಸ್ ಅವರು "ಆರೋಗೆಯವ ಭಾಗ್ಯ" ಎಂದು ಹೇಳುತಾ ಅನಾರೋಗ್ಯವೇನಿಸಿದರೆ ಶಿವವ ವೈದ್ಯರನ್ನು ಸಂಪರ್ಕಿಸಿ ಚಿಕಿತ್ಸೆ ಪಡೆದುಕೊಳ್ಳಬೇಕು, ಗ್ರಾಮೀಣ ಭಾಗದ ಬಡಜನರಿಗಾಗಿ ಈ ಶಿಬಿರವನ್ನು ಹಮ್ಮಿಕೊಂಡಿದ ಆರ್ಬಿಟ್ ಸಂಸ್ಥೆ ಹಾಗೂ ಹೆಚ್ಸಜಿ ಆಸ್ಪತ್ರೆ ಮತ್ತು ಐ.ಸಿ.ಎಸ್ ಅವರಿಗೆ ಧನ್ಯವಾದಗಳನ್ನು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ಫಾ// ವಿಜಯಕುಮಾರ, ಗ್ರಾಪಂ ಅಧ್ಯಕ್ಷರಾದ ಶ್ರೀ ಅನಂದ ಜಲಸಂಗಿ ಉಪ-ಕೇಂದ್ರದ ಸಿ.ಎಚ್.ಓ ಶ್ರೀಮತಿ ವಾಲಾ, ಹೆಚ್.ಸಿ.ಜಿ ಮತ್ತು ಸಾಲಿನ ಆಸ್ಪತ್ರೆ ಸಿಬ್ಬಂದಿವರ್ಗದವರು ಹಾಗೂ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಪ್ರವೀಣ, ಶ್ರೀ ವಿಜಯಕುಮಾರ, ಶ್ರೀಮತಿ ಸವಿತಾ, ಶ್ರೀಮತಿ ಮಹಾದೇವಿ, ಶ್ರೀಮತಿ ಮಮತಾ, ಶ್ರೀಮತಿ ಕವಿತಾ, ಕುಮಾರ ನಿಕ್ಸನ್ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು. ಈ ಶಬಿರದಲ್ಲಿ 75 ಜನರು ಭಾಗವಹಿಸಿ ಶಿಬಿರದ ಸದುಪಯೋಗವನ್ನು ಪಡೆದು-ಕೊಂಡಿದ್ದಾರೆ.

Road, Discuss & Debate With Editor Dr. N Prashant Rao
ಭಾರತ BV NEWS ವೈಭವ
New Delhi RNI Reg No 51768
ಕನ್ನಡ ದಿನಪತ್ರಿಕೆ Bharat Vaibhav Daily
BV NEWS KANNADA bharathvaibhav.com 94826 33333 bvdaily2013@gmail.com
Page (5)
16 Jun 2023
POWERED BY. KHUSHI HOST

## ಮಹಿಳೆಯರು ಪ್ರತಿಯೊಂದು ಕ್ಷೇತ್ರದಲ್ಲಿ ಭಾಗವಹಿಸಬೇಕು



**ಭಾರತ ವೈಭವ: ಸಜೀಶ ಲಂಬುನೋರ್**

ಹುಮನಾಬಾದ: ಮಹಿಳೆಯರು ಪ್ರತಿಯೊಂದು ಕ್ಷೇತ್ರದಲ್ಲಿ ಧೈರ್ಯದಿಂದ ಭಾಗವಹಿಸಿ ಮುಂದೆ ಸಾಗಬೇಕು ಎಂದು ಸಿಸ್ಟರ್ ನ್ಯಾನ್ಸಿ ಹೇಳಿದರು.

ದಿನಾಂಕ 12-6-2023 ಸೋಮವಾರದಂದು ಮಹಿಳಾ ಸಬಲೀಕರಣ ಯೋಜನೆ ಮಿಜೋರಿಯರ್ ಹಾಗೂ ಆರ್ಬಿಟ್ ಸಂಸ್ಥೆಯ ಅಡಿಯಲ್ಲಿ ಬರುವ ಮಹಿಳಾ ಸ್ವಸಾಯ ಸಂಘಗಳ ಪದಾಧಿಕಾರಿಗಳಿಗೆ ಮಹಾಸಂಗ ಮತ್ತು ತಾಲೂಕ ಒಕ್ಕೂಟಗಳ ಬಲವರ್ಧನೆ ಕುರಿತು ಒಂದು ದಿನದ ತರಬೇತಿ ಕಾರ್ಯಗಾರವನ್ನು ಆರ್ಬಿಟ್ ಸಭಾಂಗಣದಲ್ಲಿ ಹ'ವಿ್ಮಕೊಳ್ಳಲಾಯಿತ'ು. ಕಾರ್ಯಕ್ರಮದಲ್ಲಿ ಮಹಿಳಾಭಿವೃದ್ಧಿ ಕಾರ್ಯಕ್ರಮದ ರಾಜ್ಯ ಸಂಂ-ಯೋಜಕರಾದ ಸಿಸ್ಟರ್ ನ್ಯಾನ್ಸಿ ಅವರು ಮಾತನಾಡಿ,ಮಹಿಳೆಯರು ಕುಟುಂಬ ಹಾಗೂ ಸಂಘ ಮತ್ತು ಸಮುದಾಯದಲ್ಲಿ ನಾಯಕತ್ವ ಬೆಳೆಸಿ ಕೊಂಡು ತಾಲೂಕು,ಜಿಲ್ಲಾ ಹಾಗೂ ರಾಜ್ಯ ಮಟ್ಟದ ಒಕ್ಕೂಟದವರೆಗೂ ಹೆಮ್ಮರವಾಗಿ ಬೆಳೆಯಬೇಕು.ಪ್ರತಿಯೊಂದು ಕ್ಷೇತ್ರದಲ್ಲಿ ಮಹಿಳೆಯರು ಧೈರ್ಯವಾಗಿ ತನ್ನ ಧ್ವನಿಯನ್ನು ಎತ್ತಿಕೊಳ್ಳುವಷ್ಟು ಶಕ್ತಿ ಬೆಳೆಸಿಕೊಂಡು ಬಲಿಷ್ಠರಾಗಬೇಕು. ಮಹಿಳೆಯರು ಮನಸ್ಸು ಮಾಡಿದರೆ ಏನು ಬೇಕಾದರೂ ಸಾಧಿಸಬಲ್ಲರು ಎಂಬುದನ್ನು ಸಮಾಜಕ್ಕೆ ತೋರಿಸಬೇಕು ಎಂದು ಹೇಳಿದರು.ಆರ್ಬಿಟ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ರವರು ಪರಿಸರವನ್ನು ಕಾಪಾಡಿಕೊಳ್ಳುವುದು ನಮ್ಮೆಲ್ಲರ ಆಧ್ಯ ಕರ್ತವ್ಯವಾಗಿದೆ.ಸ್ವಸಾಯ ಸಂಘದಲ್ಲಿರುವ ಪ್ರತಿಯೊಬ್ಬ ಸದಸ್ಯರು ಮನೆಗೊಂದು ಮರ ಬೆಳೆಸಿ ಪರಿಸರವನ್ನು ರಕ್ಷಿಸಬೇಕು ಹಾಗೂ ಆರ್ಬಿಟ್ ಸಂಸ್ಥೆಯಲ್ಲಿ ಸದಸ್ಯರಾಗಿರುವುದಕ್ಕೆ ನೊಂದಾವಣಿ ಮಾಡಿಸಿಕೊಳ್ಳಬೇಕು ಎಂದು ತಿಳಿಸಿದರು. ಮಹಿಳಾಭಿವೃದ್ಧಿ ಕಾರ್ಯಕ್ರಮದ ಸಂಯೋಜಕಿ ಶ್ರೀಮತಿ ನಿರ್ಮಲ ರವರು ಆರ್ಬಿಟ್ ಸಂಸ್ಥೆಯು ಮಾಡುವ ಕೆಲಸ ಕಾರ್ಯಗಳನ್ನ ಕೊಂಡಾಡಿದರು.

## ವಿಶೇಷ ಚೇತನರಿಗಾಗಿ ಕಂಪ್ಯೂಟರ್ ತರಬೇತಿ



ಹುಮನಾಬಾದ:- ದಿನಾಂಕ 19.06.2023 ರಂದು ಆರ್ಬಿಟ್ ಸಂಸ್ಥೆಯಲ್ಲಿ ವಿಶೇಷ ಚೇತನ ಹಾಗೂ ವಿಭಿನ್ನ ಶಕ್ತರಿಗಾಗಿ ಕಂಪ್ಯೂಟರ್ ತರಬೇತಿಯು ಆರಂಭವಾಯಿತು. ಗುಲ್ಬರ್ಗಾ ದರ್ಮಕ್ಷೇತ್ರದ ಧರ್ಮದ್ಯಾಕ್ಷರಾದ ವಂದನೀಯ ಪೂಜ್ಯ ರೋಬರ್ಟ್ ಮೈಕಲ್ ಮಿರಾಂದಾ ಹಾಗೂ ಶ್ರೇಷ್ಠ ಗುರುಗಳಾದ ವಂದನೀಯ ಸ್ವಾಮಿ ಸ್ಟ್ಯಾನಿ ಲೋಬೋ ಇವರು ಈ ತರಬೇತಿಯನ್ನು ಉದ್ಘಾಟಿಸಿ ಆಶೀರ್ವಾದಿಸಿದರು.

ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ವಂದನೀಯ ಸ್ವಾಮಿ ವಿಕ್ಟರ್ ಅನಿಲ್ ವಾಸ್ ಮಾತನಾಡಿ ಯೇಸು ಸಭೆಯಿಂದ ಲಭಿಸಿದ ಆರ್ಥಿಕ ಸಹಾಯದಿಂದ 10 ಕಂಪ್ಯೂಟರಗಳನ್ನು ಬೀದರ ಜಿಲ್ಲೆಯ ಆಸಕ್ತಿಯುಳ್ಳ ವಿಶೆಷ ಚೇತನ ಹಾಗೂ ವಿಭಿನ್ನ ಶಕ್ತರಿಗಾಗಿ ಈ ತರಬೇತಿಯನ್ನು ನಡೆಸಲಾಗುವದು ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಉದ್ದೆಶಿಸಿ ಮಾತನಾಡಿದ ಗುಲ್ಬರ್ಗಾ ದರ್ಮಕ್ಷೇತ್ರದ ಧರ್ಮದ್ಯಾಕ್ಷರಾದ ವಂದನೀಯ ಪೂಜ್ಯ ರೋಬರ್ಟ್ ಮೈಕಲ್ ಮಿರಾಂದಾ ಇವರು ದಾನಿಗಳನ್ನು, ಸಂಸ್ಥೆಯ ನಿರ್ದೇಶಕರನ್ನು ಹಾಗೂ ಎಲ್ಲಾ ಸಿಬ್ಬಂದಿವರ್ಗದವರನ್ನು ಅಭಿನಂದಿಸಿದರು. ವಿಶೇಷ ಚೇತನರಿಗಾಗಿ ಆರಂಭಿಸಿದ ಈ ತರಬೇತಿಯು ಉತ್ತಮರೀತಿಯಲ್ಲಿ ನಡೆಯಲು ಹಾಗೂ ತರಬೇತಿಯಿಂದ ಹಲವಾರು ಜನರ ಭವಿಷ್ಯ ರೂಪಿಸಿಕೊಳ್ಳುವಂತಾಗಲಿ ಎಂದು ಹಾರೈಸಿದರು.

ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಸಿಬ್ಬಂದಿವರ್ಗದವರು ಹಾಗೂ ವಿವಿದ ಕೇಂದ್ರದ ಗುರುಗಳು ಹಾಗೂ ಕನ್ಯಭಗನಿಯರು ಭಾಗವಹಿಸಿದರು.

# ಸೇವಾ ಸಂಗಮ ಸಂಸ್ಥೆ ಕಲಬುರಗಿ

## ಉಜ್ಜೀವನ ಕಾರ್ಯಕ್ರಮ



ಸೇವಾ ಸಂಗಮ ಸಂಸ್ಥೆ ಕಲಬುರಗಿ ಕಳೆದ 17 ವರ್ಷಗಳಿಂದ ಕಲಬುರಗಿ ಧರ್ಮಕ್ಷೇತ್ರದಲ್ಲಿ ಕಾರ್ಯಕ್ರಮವನ್ನು ಮಾಡಲಾಗುತ್ತಿದೆ. ದಿನಾಂಕ 27/6/2023 ರಂದು ಕಲಬುರಗಿ ಜಿಲ್ಲೆಯ ನಾಗನಹಳ್ಳಿ ಗ್ರಾಮದಲ್ಲಿ ಅಂಗನವಾಡಿ ಕೇಂದ್ರ ಮತ್ತು ಸಮುದಾಯ ಭವನದಲ್ಲಿ ಸೇವಾ ಸಂಗಮ ಸಂಸ್ಥೆಯು ವಿಶ್ವ ಪರಿಸರ ದಿನಾಚರಣೆಯ ಕಾರ್ಯಕ್ರಮ ಆಯೋಜಿಸಲಾಯಿತು. ನಿರ್ದೇಶಕರು ಫಾದರ್ ವಿಕ್ಟರ್ ವಾಸ್ ಮತ್ತು ರಾಜ್ಯಮಟ್ಟದ ಸಯೋಜಕರಾದ ರಾಬರ್ಟ ಸರ್ ಭಾಗವಹಿಸಿದರು, ಫಾದರ್ ವಿಕ್ಟರ್ ವಾಸ್ ಅವರು ವಿಶ್ವ ಪರಿಸರ ದಿನಾಚರಣೆ 1974 ರಲ್ಲಿ ಜೂನ್ 5 ರಂದು ವಿಶ್ವ ಪರಿಸರ ದಿನಾಚರಣೆ ಆಚರಿಸಲಾಗುತ್ತದೆ, ಪ್ರತಿಯೋಬ್ಬರು ಮನೆಗಳಲ್ಲಿ ಶಾಲೆಗಳಲ್ಲಿ ಗಿಡಗಳನ್ನು ಹಚಬೇಕು, ಕಾಡು ಬೆಳೆಸಿ ನಾಡು ಉಳಿಸಿ ಎಂಬ ಜಾಗೃತಿ ಮುಡಿಸಿದ್ದರು, ಅಂಗನವಾಡಿ ಕೇಂದ್ರ ಸಮುದಾಯ ಭವನ ಅವರಣದಲ್ಲಿ 25 ಸಸಿಗಳನ್ನು ಹಚಲಾಯಿತ್ತು ಈ ಒಂದು ಕಾರ್ಯಕ್ರಮಕ್ಕೆ ಗ್ರಾಮ ಪಂಚಾಯತ ಸದಸ್ಯರಾದ ಲತಾ ಕುಂಪೆಂದ್ರ, ಭಾರತಿಬಾಯಿ ಶೀವಶರಣ, ಗ್ರಾಮದ ಮುಖಂಡರು ಸೇವಾ ಸಂಗಮ ಸಂಸ್ಥೆ ಉಜ್ಜೀವನ ಸಯೋಜಕರಾದ ಚಂದ್ರಕಾಂತ ಮತ್ತು ಕಾರ್ಯಕರ್ತರು ಬಾಗವಹಿಸಿದರು.



ಕಲಬುರಗಿ ಜಿಲ್ಲೆಯ ಸೀತನೂರ ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆವತಿಯಿಂದ ಉಜ್ಜೀವನ ಕಾರ್ಯಕ್ರಮದ ಯೋಜನೆ ಅಡಿಯಲ್ಲಿ ಕಾರಿತಾಸ ಇಂಡಿಯಾ ವತಿಯಿಂದ ನೀರು ಸಂರಕ್ಷಣೆ ಬಗ್ಗೆ ಅರಿವು ಮೂಡಿಸಲಾಯಿತ್ತು. ಸೀತನೂರ ಗ್ರಾಮದಲ್ಲಿ ರೈತರಿಗೆ ತಮ್ಮ ಹೋಲದಲ್ಲಿ 7 ಜನ ರೈತರ ಹೋಲದಲ್ಲಿ ಬೋರವೆಲ್ ಪುನರ್ ಚಾಲನೆ ಮತ್ತು ಇಂಗು ಗುಂಡಿಯನ್ನು ಮಾಡಿಸಲಾಯಿತ್ತು, 5 ದಿನದ ಕೆಲಸ, ಒಂದು ದಿನಕ್ಕೆ ಸಂಬಳ 350 ರೂಪಾಯಿ ಅಂತೆ ಒಂದು ಬೋರವೆಲ್ ಪುನರ್ ಚಾಲನೆ ಮಾಡಿಸಲು 5 ಜನ ಕಾರ್ಮಿಕರು 5 ದಿನದ ಸಂಬಳ 8,875 ರೂಪಾಯಿಯನ್ನು ಪಡೆದುಕೊಂಡರು, ಒಟ್ಟು 35 ಜನರು ಎರಡು ಇಂಗು ಗುಂಡಿ ಮತ್ತು 5 ಬೋರವೆಲ್ ಪುನರ್ ಚಾಲನೆ ಮಾಡಿಸಲಾಯಿತ್ತು, 35 ಜನ ಕಾರ್ಮಿಕರಿಗೆ ಸಂಬಳ ಒಟ್ಟು ಮೋತ್ತ 62,125 ರೂ ಪಡೆದುಕೊಂಡರು.



## “ಉಸಿರಿಗಾಗಿ ಪರಿಸರ ರಕ್ಷಿಸೋಣ”






ಸೇವಾ ಸಂಗಮ ಸಂಸ್ಥೆ ಕಲಬುರಗಿ ಕಳೆದ 17 ವರ್ಷಗಳಿಂದ ಕಲಬುರಗಿ ಧರ್ಮಕ್ಷೇತ್ರದಲ್ಲಿ ಕಾರ್ಯವನ್ನು ಮಾಡಲಾಗುತ್ತಿದೆ. ವಿಶೇಷವಾಗಿ ಮಹಿಳೆಯರು, ಸ್ವ-ಸಹಾಯ ಸಂಘಗಳು, ಸಣ್ಣ ರೈತರು, ವಿಕಲ ಚೇತನರು, ಮಹಿಳಾ ಸಬಲೀಕರಣಕ್ಕಾಗಿ ಸೇವೆಯನ್ನು ಸಲ್ಲಿಸುತ್ತಾ ಬಂದಿದೆ. ಕಲಬುರಗಿ ತಾಲೂಕಿನ ನಂದೂರ (ಕೆ) ಗ್ರಾಮ ಪಂಚಾಯತ ಮತ್ತು ಫರತಾಬಾದ ಗ್ರಾಮದಲ್ಲಿ **“ವಿಶ್ವ ಪರಿಸರ ದಿನಾಚರಣೆ”** ಮಾಡಲಾಯಿತ್ತು. ಪರಿಸರ ದಿನಾಚರಣೆ ಕೇವಲ ಒಂದು ದಿನ ಆಚರಣೆ ಮಾಡುವುದಲ್ಲ ಪ್ರತಿ ದಿನ ಪರಿಸರ ದಿನಾಚರಣೆ ಮಾಡಬೇಕೆಂದರೆ ಪ್ರತಿಯೊಬ್ಬರು ಮನೆ ಮುಂದೆ ಸಸಿ ನೆಡಬೇಕೆಂದು ಗ್ರಾಮ ಪಂಚಾಯ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಹರಿಶಚಂದ್ರ ಜಾಧವ ರವರು ಅರಿವು ಮೂಡಿಸಿದರು. ಫರತಾಬಾದ ಗ್ರಾಮದಲ್ಲಿ ಜನರಿಗೆ ಅರಿವು ಮೂಡಿಸಿ 25 ಜನರಿಗೆ ಸಸಿಗಳನ್ನು ವಿತರಣೆ ಮಾಡಿ ನಿಮ್ಮ ಸುತ್ತ ಮುತ್ತಲಿನ ವಾತವರಣವನ್ನು ಸ್ವಚ್ಛತೆ ಪ್ರತಿಯೊಬ್ಬರ ಕರ್ತವ್ಯ ಆಗಿದೆ. ಆಸ್ತಿ ನಾವು ಹೇಗೆ ಕಾಪಾಡಿಕೊಳ್ಳುತ್ತೇವೆ ಹಾಗೆಯೇ ನಾವು ಪರಿಸರವನ್ನು ಕಾಪಾಡಿಕೊಳ್ಳಬೇಕೆಂದು ಸೇವಾ ಸಂಗಮ ಸಂಸ್ಥೆಯ ಉಜ್ಜೀವನ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಚಂದ್ರಕಾಂತರವರು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ನಂದೂರ (ಕೆ) ಗ್ರಾಮ ಪಂಚಾಯತ ಅಧಿಕಾರಿಗಳು, ರೈತರು, ಮಹಿಳಾ ಸ್ವ-ಸಹಾಯ ಸಂಘದವರು ಮತ್ತು ಸೇವಾ ಸಂಗಮ ಸಂಸ್ಥೆಯ ಸಿಬ್ಬಂದಿಗಳಾದ ಶ್ರೀಮತಿ ಇಂದುಮತಿ, ಶ್ರೀಮತಿ ರತ್ನಾಮಾಂಗಲ್ಯ ಮತ್ತು ಶ್ರೀಮತಿ ನಂದಿನಿ ರವರು ಸೇರಿ ಒಟ್ಟು 60 ಜನ ಭಾಗವಹಿಸಿದರು.

ದಿನಾಂಕ 25/6/2023 ರಂದು ನಂದೂರ (ಕೆ) ಗ್ರಾಮದಲ್ಲಿ ಕರ್ನಾಟಕ ರಾಜ್ಯ ಸರಕಾರ 5 ಯೋಜನೆಗಳ ಬಗ್ಗೆ 56 ಕುಟುಂಬಗಳಿಗೆ ಅರಿವು ಮೂಡಿಸಿ (ಗೃಹ ಜ್ಯೋತಿ ಯೋಜನೆ) ಬಗ್ಗೆ ಮಾಹಿತಿ ನಿಡಲಾಯಿತು, 26 ಕುಟುಂಬಗಳಿಗೆ ಉಚಿತವಾಗಿ ಸಿಗುವ 200 ಯೂನಿಟ್ ವಿದ್ಯತ್ ಯೋಜನೆಗೆ ಅರ್ಜಿ ಹಾಕಲಾಯಿತು. 200 ಯೂನಿಟ್ ಮೋತ್ತ 1500 ಅಂತೆ ಒಟ್ಟು ಮೋತ್ತ 39.000 ಪಡೆಯಲು ಅನುಕೂಲವಾಯಿತು.





# ಕರ್ನಾಟಕ ರಾಜ್ಯ ಮಟ್ಟದ ಉಜ್ಜೀವನ ಯೋಜನೆ ಕಾರ್ಯಕ್ರಮ ಸಹಾಯಕರಾದ ರಾರ್ಬಟ ಡಿ’ಸೋಜಾ ಸರ್‌ವರ ಕ್ಷೇತ್ರ ಬೇಟಿ



ದಿನಾಂಕ 26 ರಿಂದ 27 ವರಿಗೆ /6/2023 ರಂದು ನಾಗನಹಳ್ಳಿ ಮತ್ತು ಫರತಹಭಾದ ಗ್ರಾಮದಲ್ಲಿ ಸಾವಯವ ಕೃಷಿ ರೈತರಾದ ಸೋಮಶೇಕರ ಮತ್ತು ಮಿಶ್ರ ಬೆಳೆ ರೈತರಾದ ಬಸವರಾಜ ಅವರ ಹೋಲಕ್ಕೆ ಬೇಟಿ ನೀಡಿ ಬೆಳೆ ಮತ್ತು ಎರೆ ಹುಳ ತೋಟಿಗೆ ವಿಕಕ್ಷೇಣೆ ಮಾಡಿದರು. ಮತ್ತು ಕೃಷಿ ಇಲಾಖೆ ಅಧಿಕಾರಿಳಿಗೆ ಬೇಟಿ ನೀಡಿ ಸರಕಾರಿ ಯೋಜನೆ ಬಗ್ಗೆ ಪರಿಶೀಲನೆ ಮಾಡಿದ್ದರು. ಮತ್ತು 5 ಸ್ವ ಸಹಾಯ ಸಂಘದ ಸದಸ್ಯರಿಗೆ ಬೇಟಿ ನೀಡಿ ಸಂಘದ ನೀತಿ ನಿಯಮದ ಬಗ್ಗೆ ಮಾಹಿತಿ ನೀಡಿದ್ದರು.



# Organization of Bidar Integral Transformation (ORBIT)



# APPEAL

***Remove 'DIS' From DISABLE***

(Only for Indian citizens)

**Account Details :**
**Organization of Bidar Integral**
**Account Number: 3410101006386**
**IFSC: CNRB0003410**
**Branch: Humnabad**

**DONATE NOW**

**Donation Exempted U/S 80G of IT Act 1961**

***Sponsor a Child with Rs. 500 per Month /6000 per Year.***

*Our goal is to "Focus on what children can do, their abilities, rather than their disability."*

**ACTION PLANS :**

1. Assessment and screening of 0-6 years children.
2. Home and Rehabilitation Centre-based intervention support.
3. For Children therapeutic and for Parents/ care takers counselling support.
4. Physical Assessment and distribution of Aids and Appliances.
5. Continuous medication, physiotherapy and surgery support.
6. Physical nourishment through nutritious food support.
7. Social Security and advocacy -UDID, Aadhaar Card & School Enrolment,

**Sponsor a child because every child needs someone like You**


**ADDRESS**

ORBIT, N.H 65, Near Railway Station, Hydrabad Road,
Humnabad Tq. Dist. Bidar, Karnataka 585330
Contact Number: 8660968063, 9743112739
Email: orbitbidar93@gmail.com website: www.orbitbidar.org

**Fr. Victor Anil Vas**
Director ORBIT


Note : Please WhatsApp your address to the above given number after sending money.

‘For it is in giving we receive’

*St. Francis Assisi*

| Name of the donor | Address |
|---|---|
| Sarita | Mangalore |
| Godawari | Mangalore |
| Gilbert | Mangalore |
| Joseph Resquinha | Mangalore |

